ಅವರಿಂದ ಆಗಲಿಲ್ಲ. ಅವರು ಚೀಫ್ ಮಿನಿಸ್ಟರ್ ಆಗಿದ್ದ ಕಾಲದಲ್ಲಿ ಮಾಡಿದ ಕೆಲಸಗಳ ಮೇಲೆ ಸಿ.ಬಿ.ಐ.ಕೇಸ್ ಇದೆ. ಮಾನ್ಯ ವೀರಪ್ಪಮೊಯಿಲಿಯವರ ಮೇಲೆ ಪಬ್ಲಿಕ್‌ನಲ್ಲಿ ಏನಾದರೂ ಡಿಫರೆನ್ಸ್ ಇದೆಯಾ? ಏನೂ ಇಲ್ಲ. ಅವರು ಬಂದ ಮೇಲೆ ಜನಗಳಿಗೆ ಒಳ್ಳೆಯ ಕೆಲಸ ಮಾಡಿದ್ದಾರೆ. ಡಾ : ಜೆ. ಜಯಲಲಿತರಾವರು ಏನು ರೂಟ್ ತೋರಿಸಿದ್ದಾರೋ ಆ ರೂಟ್‌ನಲ್ಲಿ ಇವರು ಈಗ ಮಾಡಿದ್ದಾರೆ. ಅದಕ್ಕೋಸ್ಕರ ನಾನು ಅವರಿಗೆ ಬಹಳ ಥಾಂಕ್ಸ್ ಹೇಳುತ್ತೇನೆ. ನನ್ನ ಪರವಾಗಿ ಮತ್ತು ನನ್ನ ಇ.ಐ.ಡಿ.ಎಂ.ಕೆ.ಪರವಾಗಿ ಈ ಬಿಲ್‌ಗೆ ಈ ಸಂದರ್ಭದಲ್ಲಿ ಒಪ್ಪಿಗೆ ಕೊಡುತ್ತೇನೆ. ಇವತ್ತು ಅಪೊಸೀಷನ್ ಲೀಡರ್ ಮತ್ತು ಶಾಸಕರೆಲ್ಲಾ ಬಾಯ್‌ಕಾಟ್ ಮಾಡಿದ್ದಾರೆ. ಬಹಳ ಇಂಪಾರ್ಟೆಂಟ್ ಸಬ್‌ಜಕ್ಟ್ ಇದಾಗಿರುವುದರಿಂದ ಈ ರಾಜ್ಯದ ಮಕ್ಕಳಿಗೆ ಅವರು ದ್ರೋಹ ಮಾಡಿದ್ದಾರೆಂದು ನನ್ನ ಒಪೀನಿಯನ್ ಹೇಳಿ ಅವರು ಮಾಡಿದ್ದುದು ಸರಿಯಿಲ್ಲ, ಬಾಯ್‌ಕಾಟ್ ಮಾಡಿರುವುದನ್ನು ವಾಪಸ್ ತೆಗೆದುಕೊಂಡು ನಾಳೆ ಸಭೆಗೆ ಬಂದು ಅವರ ಒಪೀನಿಯನ್ ಏನು ಇದೆ ಎಂದು ಮಾತನಾಡಬೇಕೆಂದು ಕೇಳಿಕೊಂಡು ಅವರು ಬಾಯ್‌ಕಾಟ್ ಮಾಡಿರುವುದನ್ನು ನಾನು ಖಂಡಿಸಿ ನನ್ನ ಪರವಾಗಿ ಮತ್ತು ಎ.ಐ.ಡಿ.ಎಂ.ಕೆ.ಪರವಾಗಿ ನಾನು ಇಲ್ಲಿ ಧರಣಿ ಕುಳಿತುಕೊಳ್ಳುತ್ತೇನೆ.

ಮಾನ್ಯ ಸದಸ್ಯರಾದ ಭಕವತ್ಸಲಂರವರು ಸದನದ ಬಾವಿಯಲ್ಲಿ ಧರಣಿ ಕುಳಿತುಕೊಂಡರು ನಂತರ ಮಾನ್ಯ ಉಪಾಧ್ಯಕ್ಷರ ಕೊರಿಕೆ ಮೇರೆಗೆ ತಮ್ಮ ಸ್ಥಳದಲ್ಲಿ ಕುಳಿತರು.

ಪ್ರಕಟಣೆ

(1) ಉಪಾಧ್ಯಕ್ಷರು : ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 114 ರ ಮೇರೆಗೆ ದಿನಾಂಕ 19ನೇ ಸೆಪ್ಟೆಂಬರ್ 1994 ರಂದು ಕೂಡಲ ಸಂಗಮ ಅಭಿವೃದ್ಧಿ ಮಂಡಲ ವಿಧೇಯಕ 1994ನ್ನು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಿತೆಂದು ತಿಳಿಸಿರುತ್ತಾರೆ.

(2) ವಿಧಾನ ಸಭಾ ಕಾರ್ಯಕಲಾಪಗಳ ಸಲಹಾ ಸಮಿತಿಯು ಇಂದು ದಿನಾಂಕ 19ನೇ ಸೆಪ್ಟಂಬರ್, 1994ರಂದು 4-00 ಗಂಟೆಗೆ ಸಭೆ ಸೇರಿ ದಿನಾಂಕ 20ನೇ ಸೆಪ್ಟಂಬರ್ 1994ರಂದು ಬೆಳಗ್ಗೆ 11.30ಗೆ ಸಭೆಸೇರಿ 1994ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ಶೈಕ್ಷಣಿಕ ಸಂಸ್ಥೆಗಳು ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕದ ಮೇಲೆ ಚರ್ಚೆಯನ್ನು ಮುಂದುವರಿಸಿ ಮತಕ್ಕೆ ಹಾಕಲು ತೀರ್ಮಾನಿಸಿತು.

ಕಾರ್ಯಕಲಾಪಗಳ ಸಲಹಾ ಸಮಿತಿಯ ಶಿಫಾರಸ್ಸನ್ನು ಈ ಸದನವು ಒಪ್ಪಿದೆ ಎಂದು ಭಾವಿಸುತ್ತೇನೆ.

ಈಗ ಸದನದ ಕಲಾಪ ಮುಂದೂಡಲ್ಪಟ್ಟು ಮತ್ತೆ ನಾಳೆ ಬೆಳಿಗ್ಗೆ 11.30 ಗಂಟೆಗೆ ಸಭೆ ಸಮಾವೇಶಗೊಳ್ಳುತ್ತದೆ.

(ಸದನವು 5 ಗಂಟೆ 37 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 20ನೇ ಸೆಪ್ಟೆಂಬರ್ ವರೆಗೆ 1994 ರ ಮಂಗಳವಾರ ಬೆಳಗ್ಗೆ 11.30 ಗಂಟೆಗೆ ಸೇರಲು ನಿಶ್ಚಯಿಸಿತು.)

* ಈ ಚಿಹ್ನೆಯು ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸುವುದಿಲ್ಲವೆಂದು ಸೂಚಿಸುತ್ತದೆ.